ದಿನಾಂಕ 25/10/2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರಿದ ಪಾಟೀ ಸವಾಲು ಮಾನ್ಯ ಶ್ರೀ ಜೆ ಎನ್ ಎನ್ ವಕೀಲರಿಂದಃ**

ನಾನು 11 x 05 ಅಡಿ ವಿಸ್ತೀಣರ್ಕ್ಕೆ ಇದೆ ನ್ಯಾಯಾಲಯದಲ್ಲಿ O.S.183/08 ಹೂಡಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ಪೂರ್ವರ್ದ ಚಿಕ್ಕುಬಂದಿ ಮೊಹಮದ್ ಎಂದು ನೀಡಿದ್ದೆ ಎಂದರೆ ಸಾಕ್ಷಿ ಹೇಳುತ್ತಾರೆ ಟೈಲರ್ ಅಬ್ದುಲ್ ಎಂದು ನೀಡಿದ್ದೆ ಎಂದು ಹೇಳುತ್ತಾರೆ. ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ಬಾವನ್ನ ಎಂದು ಕೊಟ್ಟಿದ್ದೆ ಎಂದರೆ ಸರಿ ಮತ್ತು ದಕ್ಷಿಣಕ್ಕೆ ಡಿ ವಿ ಜಿ ರಸ್ತೆ ಎಂದು ಕೊಟ್ಟಿದೆ ಎಂದರೆ ಸರಿ. 2008 ನೇ ಇಸವಿಗೆ ಡಿ ವಿ ಜಿ ರಸ್ತೆ ಅಗಲೀಕರಣ ಆಗಲಿರಲಿಲ್ಲ ಎಂದರೆ ಸರಿ. O.S.183/08 ರಲ್ಲಿ ನ್ಯಾಯಾಧೀಶರು ಸ್ಥಳ ಪರೀಕ್ಷೆಗೆಂದು ಬಂದಿದ್ದರು ಎಂದರೆ ಸರಿ. ನ್ಯಾಯಾಧೀಶರು ಸ್ಥಳಕ್ಕೆ ಬಂದ ನಂತರ ನಾನು ಮತ್ತು ನನ್ನ ಅಣ್ಣ ವಾದಿ ರಾಜಿ ಮಾಡಿಕೊಂಡರು ಎಂದರೆ ಸರಿ.

ನ್ಯಾಯಾಧೀಶರು ಸ್ಥಳಕ್ಕೆ ಬೇಟಿ ನೀಡಿದಾಗ ನಾನು ಮತ್ತು ನನ್ನ ಅಣ್ಣ ಇಬ್ಬರು ಸ್ಥಳದಲ್ಲಿ ಹಾಜರಿದ್ದರು ಎಂದರೆ ಸರಿ. ನ್ಯಾಯಾಧೀಶರು ನಮ್ಮ ಸಮಕ್ಷಮದಲ್ಲೇ O.S.183/08 ರ ಸ್ವತ್ತನ್ನು ಹಾಗೂ ಅದಕ್ಕೆ ಉತ್ತರದಲ್ಲಿರುವ ನನ್ನ ಅಣ್ಣನ ಸ್ವತ್ತನ್ನು ಅಳತೆ ಮಾಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಉತ್ತರದಿಂದ ಆ ದಾವಾ ಸ್ವತ್ತಿನ ವರೆವಿಗೂ 33 ಅಡಿ ನ್ಯಾಯಾಧೀಶರು ಅಳತೆ ಮಾಡಿದ್ದರು ಎಂದರೆ ಸರಿ. ಸದರಿ 33 ಅಡಿ ಈ ದಾವೆಯ ವಾದಿಗೆ ಸೇರಿದ ಸ್ವತ್ತು ಎಂದರೆ ಸರಿ. ಸದರಿ 33 ಅಡಿ ನಂತರ 1.8 ಅಡಿ ಮಿಕ್ಕಿತ್ತು ಎಂದರೆ ಸಾಕ್ಷಿ ಹೇಳುತ್ತಾರೆ 1.8 ಅಡಿ ಜೊತೆಗೆ ನನ್ನ ಹಳೆ ಅಂಗಡಿ ಕಟ್ಟಡ ಅಲ್ಲಿತ್ತೆಂದು.

ನನ್ನ ಅಣ್ಣನ ಪೂ-ಪ 22 ಅಡಿ ಮತ್ತು ಉ-ದ 33 ಅಡಿಗಳು ಮತ್ತು ಅದರ ದಕ್ಷಿಣಕ್ಕೆ ನನಗೆ ಸೇರಿದ ಪೂ-ಪ 11 ಅಡಿ ಮತ್ತು ಉ-ದ 1.8 ಅಡಿಗೆ ರಾಜಿ ಒಪ್ಪಂದ ಆಗಿರುತ್ತದೆ ಎಂದರೆ ಸಾಕ್ಷಿ ಹೇಳುತ್ತಾರೆ ನಾನು ರಾಜಿ ಮಾಡಿಕೊಂಡಿದ್ದು ಪೂ-ಪ 11 ಮತ್ತು ಉ-ದ 5 ಅಡಿಗೆಂದು. ಸದರಿ ದಾವೆಯಲ್ಲಿ ನನಗೆ ಶ್ರೀಯುತ ಅಲ್ಲಾಬಕಾಷ ರವರು ವಕೀಲರಾಗಿದ್ದರು ಎಂದರೆ ಸರಿ. ಸದರಿ ರಾಜಿ ಪತ್ರಕ್ಕೆ ನಾನು ನನ್ನ ಅಣ್ಣ ಹಾಗೂ ನಮ್ಮ ವಕೀಲರುಗಳಾದ ಶ್ರೀಯುತ ಅಲ್ಲಾಬಕಾಷ ಮತ್ತು ನಂಜಪ್ಪ ನವರು ಹಾಗೂ ನ್ಯಾಯಾಧೀಶರು ಕೂಡ ಸಹಿ ಹಾಕಿದ್ದರು ಎಂದರೆ ಸರಿ. ನಾನು ಒಪ್ಪಿಕೊಂಡಂತಹ ವಿಚಾರಗಳನ್ನು ನಮ್ಮ ವಕೀಲರು ಬರೆದಿರುತ್ತಾರೆ ಎಂದರೆ ಸರಿ. ಸಾಕ್ಷಿ ಹೇಳುತ್ತಾರೆ ನಕ್ಷೆಯನ್ನು ಸಹಾ ಪುರಸಬೇ ಅಧಿಕಾರಿ ಒಬ್ಬರು ತಯಾರಿಸಿರುತ್ತಾರೆ.

ನ್ಯಾಯಾಧೀಶರು ಸದರಿ ರಾಜಿ ಪತ್ರದಲ್ಲಿನ ಎಲ್ಲಾ ಅಂಶಗಳನ್ನು ಓದಿ ನಮಗೆ ಹೇಳಿದ ನಂತರವೇ ನಾವು ಸಹಿ ಹಾಕಿರುತ್ತೇವೆ ಎಂದರೆ ಸಾಕ್ಷಿ ಹೇಳುತ್ತಾರೆ ನಾನು 11 x 1.08 ಜೊತೆಗೆ ನನ್ನ ಅಂಗಡಿ ಎಲ್ಲವೂ ಸೇರಿ 11 x 5 ಅಡಿಗೆ ಒಪ್ಪಿಕೊಂಡು ಸಹಿ ಹಾಕಿರುತ್ತೇನೆ. ಸಾಕ್ಷಿಗೆ ತಾನು ಹಾಜರು ಮಾಡಿರುವ ಮತ್ತು ಗುತಿರ್ಸಲ್ಪಟಿರುವ ದಾಖಲಾತಿಗಳನ್ನು ತೋರಿಸಲಾಗಿ ಅದರಲ್ಲಿ ಯಾವುದೇ ನಕ್ಷೆ ಇಲ್ಲವೆಂದು ಕೇಳಲು ಸಾಕ್ಷಿ ಹೇಳುತ್ತಾರೆ ಎಲ್ಲಾ ದಾಖಲಾತಿಗಳನ್ನು ಕೊಟಿದ್ದೆ. ನಕ್ಷೆ ಇಲ್ಲ ಎಂದರೆ ಸಾಕ್ಷಿ ಹೇಳುತ್ತಾರೆ ನನಗೆ ಗೊತ್ತಿಲ್ಲ. O.S.183/08, 11 x 1.08 ಆಗಿರುತ್ತದೆ ಎಂದರೆ ಸಾಕ್ಷಿ ಹೇಳುತ್ತಾರೆ 11 x 5 ಕ್ಕೆ ಆಗಿತ್ತು ಎಂದು ಹೇಳುತ್ತಾರೆ.

ಸತ್ಯಂಶ ಹೊರಗೆ ಬರುತ್ತದೆ ಎಂಬ ಭಯದಿಂದ ನಾನು ರಾಜಿ ಪತ್ರವನ್ನು ಮಾತ್ರ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು ಅದರ ಜೊತೆಗೆ ಲಗತ್ತಿಸಿರುವ ನಕಾಶೆಯನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾನು 10 ನೇ ತರಗತಿ ತನಕ ಶಿಕ್ಷಣ ಪಡೆದಿರುತ್ತೇನೆ. ನನ್ನ 1.08 ಅಡಿ ರಸ್ತೆ ಅಗಲೀಕರಣದಲ್ಲಿ ವಿಲೀನವಾಗಿರುತ್ತದೆ ಎಂದರೆ ಸರಿಯಲ್ಲ. ಡಿ ವಿ ಜಿ ರಸ್ತೆಯ ಮಧ್ಯ ಭಾಗದಿಂದ 49 ½ ಅಡಿ ವಿಸ್ತೀಣರ್ ಇರುತ್ತದೆ ಎಂದರೆ ಸಾಕ್ಷಿ ಹೇಳುತ್ತಾರೆ ರಸ್ತೆ ಮತ್ತು ಚರಂಡಿ ಸೇರಿ ಇರುತ್ತದೆ. 49 ½ ಅಡಿ ಗೆ ಅಂಟಿಕೊಂಡು ವಾದಿ ಬಾವಣ್ಣನ 33 x 22 ರ ಸ್ವತ್ತು ಇರುತ್ತದೆ ಎಂದರೆ ಸರಿಯಲ್ಲ.

22 x 33 ರ ಸ್ವತ್ತಿನಲ್ಲಿ ವಾದಿ ಅಂಗಡಿ ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಹೇಳುತ್ತಾರೆ ಅವರ ಜಾಗದಲ್ಲಿ

ಕಟ್ಟಿಕೊಂಡಿರುತ್ತಾರೆ ಆದರೆ ಅಳತೆ ಗೊತ್ತಿಲ್ಲ. ವಾದಿಯ ಅಂಗಡಿಯ ಪೂರ್ವಕ್ಕೆ ಅಬ್ದುಲ್ ಸಾಬ್ ರವರ ಅಂಗಡಿ ಇರುತ್ತದೆ ಎಂದರೆ ಸಾಕ್ಷಿ ಹೇಳುತ್ತಾರೆ ನನ್ನ ಅಂಗಡಿ ಮತ್ತು ವಾದಿಯ ಅಂಗಡಿಯ ಪೂರ್ವಕ್ಕೂ ಟೈಲರ್ ಅಬ್ದುಲ್ ಸಾಬ್ ಇರುತ್ತಾರೆ ಎಂದು ಹೇಳುತ್ತಾರೆ. ರಸ್ತೆಯ ಮಧ್ಯ ಭಾಗದಿಂದ ಅಬ್ದುಲ್ ಸಾಬ್ ರವರ ಅಂಗಡಿ 49 ½ ಅಡಿ ಆದ ಮೇಲೆ ಅಬ್ದುಲ್ ಸಾಬ್ ರವರ ಅಂಗಡಿ ಬರುತ್ತದೆ ಎಂದರೆ ಸರಿ. ರಂಗಪ್ಪ, ರಾಮಯ್ಯ, ದತ್ತ, ರಾಹುಲ್, ರಾಜಾ ರೆಡ್ಡಿ ಎಲ್ಲರ ಅಂಗಡಿಗಳು 49 ½ ಅಡಿ ಅಂತರದಲ್ಲಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ವಾದಿಯ ಅಂಗಡಿಯ ಪಶ್ಚಿಮಕ್ಕೆ ನಂಜುಂಡಪ್ಪ ಅಂಗಡಿ ಬರುತ್ತದೆ ಎಂದರೆ ಸರಿ. ನಂಜುಂಡಪ್ಪ ರವರ ಅಂಗಡಿ ಪಶ್ಚಿಮಕ್ಕೆ ಲಕ್ಷ್ಮಿದೇವಮ್ಮ ರವರ ಅಂಗಡಿ ಬರುತ್ತದೆ ಎಂದರೆ ಸರಿ. ಲಕ್ಷ್ಮಿದೇವಮ್ಮ ರವರ ಅಂಗಡಿ ಪಕ್ಕದಲ್ಲಿ ಖಾದರ್ ಸಾಬ್ ರವರ ಅಂಗಡಿ ಬರುತ್ತದೆ ಎಂದರೆ ಸರಿ. ಖಾದರ್ ಸಾಬ್ ರವರ ಅಂಗಡಿ ಪಶ್ಚಿಮಕ್ಕೆ ಎಸ್ ಕೆ ವಿ ಹೋಟಲ್ ಬರುತ್ತದೆ ಎಂದರೆ ಸರಿ. ನಂಜುಂಡಪ್ಪ, ಲಕ್ಷ್ಮಿದೇವಮ್ಮ, ಖಾದರ್ ಸಾಬ್ ಮತ್ತು ಎಸ್ ಕೆ ವಿ ಹೋಟಲ್ ಎಲ್ಲರೂ 49 ½ ಅಡಿ ಅಂತರದಲ್ಲಿ ಬರುತ್ತದೆ ಎಂದರೆ ಸರಿ. ಈ ಎಲ್ಲಾ ಅಂಗಡಿಗಳು ಒಂದೇ ಸಾಲಿನಲ್ಲಿ ಇರುತ್ತದೆ ಎಂದರೆ ಸಾಕ್ಷಿ ಹೇಳುತ್ತಾರೆ ಸ್ವಲ್ಪ ಸೊಟಕ್ಕೆ ಬರುತ್ತದೆ. ಈ ಎಲ್ಲಾ ಅಂಗಡಿಗಳು ಬಾಗಿಲುಗಳು ದಕ್ಷಿಣಕ್ಕೆ ಇರುತ್ತದೆ ಎಂದರೆ ಸರಿ.

ನಾನು ಈ ಎಲ್ಲಾ ಅಂಗಡಿಗಳನ್ನು ನೋಡಿರುತ್ತೇನೆ. ಸದರಿ ಅಂಗಡಿಗಳಿಗೆ ಬಾಗಿಲುಗಳು ಇರುತ್ತದೆ. ಸದರಿ ಅಂಗಡಿಗಳ ಬಾಗಿಲುಗಳು ಒಂದೇ ಸಾಲಿನಲ್ಲಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿ ಪಿ 8 ನ್ನು ತೋರಿಸಲಾಗಿ ನಿ ಪಿ 8 ರಲ್ಲಿ ಎಲ್ಲಾ ಅಂಗಡಿಗಳು ಒಂದೇ ಸಾಲಿನಲ್ಲಿ ಕಾಣುತ್ತವೆ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ವಾಸ್ತವವಾಗಿ ಬೇರೆ ರೀತಿ ಇರುತ್ತದೆ. ಸಾಕ್ಷಿಗೆ ನಿ ಪಿ 8 ಕ್ಕಿಂತ ಉತ್ತಮ ಗುಣಮಟ್ಟದ ಛಾಯಚಿತ್ರಗಳನ್ನು ಹಾಜರು ಪಡಿಸಿದೀರ ಎಂದು ಕೇಳಲು ಸಾಕ್ಷಿ ಹೇಳುತ್ತಾರೆ ನಮಗೆ ಅದರ ಅವಶ್ಯಕತೆ ಬಂದಿಲ್ಲ ಮತ್ತು ನಾನು ಕೊಟ್ಟಿಲ್ಲ.

ನಾನು ದಿನಾಲು ಡಿ ವಿ ಜಿ ರಸ್ತೆಯನ್ನು ನೋಡುತ್ತೇನೆ. ಡಿ ವಿ ಜಿ ರಸ್ತೆಯ ವಿಭಜಕ 4 ಅಡಿ ಇರುತ್ತದೆ ಎಂದರೆ ಸಾಕ್ಷಿ ಹೇಳುತ್ತಾರೆ ನಾನು ಅಳತೆ ಮಾಡಿಲ್ಲ. ಡಿ ವಿ ಜಿ ರಸ್ತೆ ಉ-ದ ಎಷ್ಟು ಅಡಿ ಇರುತ್ತದೆ ಎಂದು ನಾನು ಅಳತೆ ಮಾಡಿಲ್ಲ. Drainage ಎಷ್ಟು ಅಡಿ ಆಗಲ ಮತ್ತು ಉದ್ದ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಪೆಟ್ಟಿಗೆ ಅಂಗಡಿ Drainage ನ ದಕ್ಷಿಣ ದಿಕ್ಕಿಗೆ ಬರುತ್ತದೆ. ರಸ್ತೆಯ ಮಧ್ಯ ಭಾಗದಿಂದ 49 ½ ಅಡಿ ನಂತರ ನನ್ನ ಅಂಗಡಿ ಬರುತ್ತದೆ. ನಾನು 49 ½ ಅಡಿಯಿಂದ ಖುದ್ದು ಅಳತೆ ಮಾಡಿಸಿರುತ್ತೇನೆ. ನನ್ನ ಅಂಗಡಿ ಇಟ್ಟುಕೊಳ್ಳಬೇಕಾದರೆ ಅಳತೆ ಮಾಡಿಸಿರುತ್ತೇನೆ.

ಈ ರೀತಿ ಅಳತೆ ಮಾಡಿಸಬೇಕಾದರೆ ರಸ್ತೆ ಎಷ್ಟು ಅಡಿ ಮತ್ತು Drainage ಎಷ್ಟು ಅಡಿ ಎಂದು ಪ್ರತ್ಯೇಕವಾಗಿ ಅಳತೆ ಮಾಡಿಸಿರುವುದಿಲ್ಲ. ಟಾರ್ ಉ-ದ 40 ಅಡಿ ಇರುತ್ತದೆ ಎಂದರೆ ಸರಿಯಲ್ಲ. Drainage ಮೇಲೆ ಆರ್ ಸಿ ಸಿ ಕಾಂಕ್ರೇಟ್ ಹಾಕಿರುತ್ತಾರೆ ಎಂದರೆ ಸರಿ. ವಾದಿ ತನ್ನ ಅಂಗಡಿಗೆ ಮೆಟ್ಟಿಲುಗಳನ್ನು ಇಟ್ಟುಕೊಂಡಿರುತ್ತಾರೆ ಎಂದರೆ ಸರಿ.ಸದರಿ ಮೆಟ್ಟಿಲುಗಳು 2 ½ ಅಡಿ ಅಗಲವಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಅಂಗಡಿ ಡಿ ವಿ ಜಿ ರಸ್ತೆ ಮಧ್ಯ ಭಾಗದಿಂದ 49 ½ ಅಡಿಯಲ್ಲಿ ಬರುತ್ತದೆ ಎಂದರೆ ಇರಬಹುದು.

ನನ್ನ ಅಂಗಡಿಯ ಪೂ-ಪ 11 ಅಡಿ ಮತ್ತು ಉ-ದ 5 ಅಡಿ ಅದರಲ್ಲಿ ವಾದಿ 1.5 ಅಡಿ ಒತ್ತುವರಿ ಮಾಡಿದ್ದಾರೆ. ಈ ರೀತಿ ವಾದಿ ನನ್ನ ಜಾಗಕ್ಕೆ ಒತ್ತುವರಿ 2008 ರಲ್ಲಿ ಮಾಡಿರುತ್ತಾರೆ. ನನ್ನ ತಕರಾರು ಪತ್ರದಲ್ಲಿ ವಾದಿ ನನ್ನ ಸ್ವತ್ತನ್ನು ಒತ್ತುವರಿ ಮಾಡಿರುವ ಬಗ್ಗೆ ಸ್ವ ಇಚ್ಛೆಯಿಂದ ನನ್ನ ವಕೀಲರಿಗೆ ಹೇಳಿ ಬರೆಸಿರುವುದಿಲ್ಲ. O.S.183/08 ರಲ್ಲೇ ಈ ರೀತಿ ವಾದಿ ಒತ್ತುವರಿ ಮಾಡಿರುವ ಬಗ್ಗೆ ಯಾವ ಕಾರಣಕ್ಕೆ ಹೇಳಲಿಲ್ಲ ಎಂದರೆ ಸಾಕ್ಷಿ ಹೇಳುತ್ತಾರೆ ನ್ಯಾಯಾಲಯವೇ ಬಂದು ಅಳತೆ ಮಾಡಿದ್ದರಿಂದ ನನ್ನ ಪಾಲಿಗೆ ಬಂದದ್ದನ್ನು ಒಪ್ಪಿಕೊಂಡಿರುತ್ತೇನೆ.

ವಾದಿಗೆ ಸೇರಿರುವ 22 x 33 ರ ದಕ್ಷಿಣಕ್ಕೆ 11 x 1.5 ಅಡಿಯಲ್ಲಿ ನಾನು ಪೆಟ್ಟಿಗೆ ಅಂಗಡಿಯನ್ನು ಅನಧಿಕೃತವಾಗಿ ಇಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಅಂಗಡಿಯನ್ನು ಇಟ್ಟುಕೊಳ್ಳಲು ಪರವಾನಿಗೆ ಪಡೆದುಕೊಂಡಿರುತ್ತೇನೆ. ನಾನು ಸದರಿ ಪರವಾನಿಗೆಯನ್ನು ನನ್ನ ವಕೀಲರಿಗೆ ನೀಡಿರುತ್ತೇನೆ. ನನ್ನ ಅಣ್ಣ ನನ್ನ ಸ್ವತ್ತಿನಲ್ಲಿ

ಯಾವುದೇ ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೆಟ್ಟಿಗೆ ಅಂಗಡಿ ಇಡಬೇಕಾದರೆ Drainage ಅಸ್ತಿತ್ವದಲ್ಲಿತ್ತು. ನನ್ನ ಅಂಗಡಿಯ ದಕ್ಷಿಣದ ದಿಕ್ಕಿಗೆ Drainage ಇರುತ್ತದೆ.

ನಾನು ಪೆಟ್ಟಿಗೆ ಅಂಗಡಿ ಇಡಬೇಕಾದರೆ Drainage ಅಡ್ಡ ಬರುತ್ತದೆ ಎಂದು ನನ್ನ ಅಂಗಡಿಯನ್ನು ಬಾವಣ್ಣನ ಜಾಗದಲ್ಲಿ ಇಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಿಂದೊಮ್ಮೆ ಜೆ ಡಿ ಎಸ್ ಪಕ್ಷದಿಂದ ವಾರ್ಡ್ ಸದಸ್ಯನಾಗಿದ್ದೆ. ನನ್ನ ಹೆಂಡ್ತಿಯೂ ಸಹಾ ಜಿಲ್ಲಾ ಪಂಚಾಯ್ತಿ ಸದಸ್ಯಳಾಗಿದ್ದಳು ಎಂದರೆ ಸರಿ. ವಾದಿ ಮನೆ ಕಟ್ಟುವ ಕಾಲಕ್ಕೆ ನಾನು ಪುರಸಬೇಗೆ ತಕರಾರುನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ತಕರಾರು ಏನಾಯಿತ್ತು ಎಂದು ಕೇಳಲು ಸಾಕ್ಷಿ ಹೇಳುತ್ತಾರೆ ಅವರವರ ಜಾಗದಲ್ಲಿ ಕಟ್ಟಿಕೊಳ್ಳಬೇಕೆಂದು ಅಳತೆ ಮಾಡಿ ನಮ್ಮ ಜಾಗಗಳನ್ನು ತೋರಿಸಿ ಪರವಾನಿಗೆ ನೀಡಿರುತ್ತಾರೆ.

ನಾನು ಇದೇ ನ್ಯಾಯಾಲಯದಲ್ಲಿ Ex.No.14/09 ನ್ನು ವಾದಿ ಈ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿರುವುದಾಗಿ ಸಲ್ಲಿಸಿದ್ದೇ ಎಂದರೆ ಸರಿ. ಸದರಿ ಅಮಲದಾರಿ ಅಜಿರ್ ವಜಾ ಆಗಿತ್ತು ಎಂದರೆ ಸಾಕ್ಷಿ ಹೇಳುತ್ತಾರೆ ಇಲ್ಲಿ ವಜಾ ಆಗಿತ್ತು. ನಾನು ಉಚ್ಚ ನ್ಯಾಯಾಲಯದಲ್ಲಿ ವಾದಿ ಪರವಾನಿಗೆ ಉಲ್ಲಂಪಿಸಿರುತ್ತಾರೆ ಎಂದು ಅಜಿರ್ ಸಲ್ಲಿಸಿರುತ್ತೇನೆ. ವಾದಿ set back ನನ್ನು ಬಿಡದೇ ನಿರ್ಮಾಣ ಮಾಡುತ್ತಿದ್ದರಿಂದ ನಾನು ಉಚ್ಚ ನ್ಯಾಯಾಲಯಕ್ಕೆ ಹೋಗಿರುತ್ತೇನೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದುಡಲಾಯಿತು.

**(ಉಕ್ತಲೇಖನವನ್ನು ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಣಗೊಳಿಸಲಾಯಿತು.)**

ಓ.ಹೇ.ಕೇ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಬಾಗೇಪಲ್ಲಿ